ಕರ್ನಾಟಕ ಸರ್ಕಾರ

ಸಿ.ಆರ್.ಪಿ.67

| |
|---|
| ಹೇಳಿಕೆ ಹಾಳೆ<br>ಆರ್.ಪಿ.ಸಂ.37<br>ನಮೂನೆ ಸಂ. 4<br>(ಸಿವಿಲ್) |

# ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಹೆಚ್ಚುವರಿ ಮೋಟಾರು ವಾಹನ ಅಪಘಾತ ಪರಿಹಾರ ಮಂಡಳಿ, ಕುಂದಾಪುರ

**ಎಂ.ವಿ.ಸಿ. : 684/2020** **ಪಿ.ಡಬ್ಲ್ಯೂ : 2**

**ದಿ : 21-07-2022 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ** : ಶ್ರೀ ಹೆಚ್.ಆರ್.ಎಸ್ ವಕೀಲರಿಂದ :

ನಾನು ಸಹಿ ಮಾಡಿದ ಸಾಕ್ಷಿ ವಿಚಾರಣೆಯ ಪ್ರಮಾಣಪತ್ರವನ್ನು ಸಲ್ಲಿಸಿದ್ದು ಅದರಲ್ಲಿ ಬರೆದಿರುವ ವಿಷಯಗಳೆಲ್ಲ ಸತ್ಯವಾಗಿದೆ. ಪ್ರಮಾಣಪತ್ರ ತಯಾರಿಸಲು ವಕೀಲರಿಗೆ ನಾನೇ ಮಾಹಿತಿ ನೀಡಿದ್ದೇನೆ .

ದಿನಾಂಕ 03-07-2022 ರಂದು ಪ್ಲಾನೆಟ್ ಕಂಪನಿಯವರು ನನಗೆ ಸಾಕ್ಷಿ ಕೊಡಲು ಅಧಿಕಾರ ಪತ್ರವನ್ನು ಗುರುತಿಸುವ ಸಂಬಂಧ ಶ್ರೀ ಎನ್.ವಿ.ಆರ್ 2 ನೇ ಎದುರುದಾರ ಪರ ವಕೀಲರು ಯಾವುದೇ ದಾಖಲೆಯನ್ನು ಹೊರ ರಾಷ್ಟ್ರಗಳಿಂದ ಬಂದಿದ್ದಲ್ಲಿ ಅವುಗಳನ್ನು ರಾಯಭಾರಿ ಕಚೇರಿಯ ಪರಿಶೀಲನೆಗೆ ಒಳಪಟ್ಟು ಅನುಮೋದಿಸಿದ ನಂತರ ನೈಜ ದಾಖಲೆ ಎಂದು ಪರಿಗಣಿಸಲಾಗುತ್ತದೆ. ಈ ಬಗ್ಗೆ ನಿಯಮಗಳಿದ್ದಲ್ಲಿ ಅದನ್ನು ವಾದ ಮಂಡಿಸುವ ಕಾಲಕ್ಕೆ ನ್ಯಾಯಾಲಯದ ಗಮನಕ್ಕೆ ತರುವ ಹಕ್ಕನ್ನು ಕಾಯ್ದಿರಿಸಿ **ನಿ.ಪಿ - 22** ಎಂದು ಗುರುತಿಸಲಾಯಿತು.

ಹಾಗೆ ಕ್ರಮ ಸಂಖ್ಯೆ 2 ಮತ್ತು 3 ರ ದಾಖಲೆಗಳನ್ನು (Public Authority for man power and work permit) ಗುರುತಿಸಲು ಅವುಗಳು ಕೊಯಿತ್ ಭಾಷೆಯಲ್ಲಿವೆ. ಹಾಗಾಗಿ ಅವುಗಳನ್ನು ಮೂಲ ದಾಖಲೆಗಳ ಆಧಾರದ ಮೇಲೆ ಆಂಗ್ಲ ಭಾಷೆಗೆ ತರ್ಜುವೆ ಮಾಡಿರುತ್ತಾರೋ ಇಲ್ಲವೋ ಎಂಬ ಬಗ್ಗೆ ಅನುಮಾನವಿದ್ದು, ಗುರುತಿಸಲು ಅವಕಾಶವಿಲ್ಲ ಎಂದು ವಾದಿಸಿರುತ್ತಾರೆ. ಮತ್ತು ಭಾಷಾಂತರ ಮಾಡಿದ ವ್ಯಕ್ತಿಯೇ ದಾಖಲಿಸಬೇಕು ಎಂದು ಸಹ ನ್ಯಾಯಾಲಯದ ಗಮನಕ್ಕೆ ತಂದಿರುತ್ತಾರೆ. ಆದರೆ ಸದರಿ ಭಾಷಾಂತರ ದಾಖಲೆಗಳು ಆಂಗ್ಲ ಭಾಷೆಯಲ್ಲಿ ಇದ್ದು, ಬ್ರಿಷಿಟ್ ಟ್ರಾನ್ಸಲೇಷನ್ ಎಂಬ ವತಿಯಿಂದ ಭಾಷಾಂತರಿಸಿದೆ ಎನ್ನುವ ಮೊಹರು ಇರುವ ಕಾರಣ ಅವುಗಳನ್ನು ಅವುಗಳ ನೈಜತೆಯನ್ನು ಅಂತಿಮ ಆದೇಶ ಮಾಡುವ ಸಮಯದಲ್ಲಿ ಅವಲೋಕಿಸಿವುದನ್ನು ಉಳಿಸಿಕೊಂಡು **ನಿ.ಪಿ - 23 ಮತ್ತು 24** ಎಂದು ಗುರುತಿಸಲಾಯಿತು.

ನನಗೆ ಸೇರಿದ ಒಂದು ಗುರುತಿನ ಚೀಟಿಯ ನೋಟರಿಯ ಪ್ರತಿಯನ್ನು ಹಾಜರುಪಡಿಸಿದ್ದೇನೆ. ಸದರಿ ದಾಖಲೆಯ ಜೊತೆ ಈಗ ನ್ಯಾಯಾಲಯದಲ್ಲಿ ಹಾಜರುಪಡಿಸಿದ ಮೂಲ ಗುರುತಿನ ಚೀಟಿ ಪರಿಶೀಲಿಸಿ **ನಿ.ಪಿ - 25** ಎಂದು ಗುರುತಿಸಲಾಯಿತು.

ನಾನು ವಿಮಾನದಲ್ಲಿ ಪ್ರಯಾಣಿಸಿ ಬಂದ ಬಗ್ಗೆ ಟಿಕೆಟ್ / PNR No. LVZOTR ದಾಖಲೆಯನ್ನು ಹಾಜರುಪಡಿಸಿದ್ದು **ನಿ.ಪಿ - 26** ಎಂದು ಗುರುತಿಸಲಾಯಿತು.

ನಂತರ ಮೃತನ ಖಾತೆ ಸಂಖ್ಯೆ 2005455150 ನ್ಯಾಷನಲ್ ಬ್ಯಾಂಕ್ ಖಾತೆಯ ದಾಖಲೆಯ ಸಂಬಂಧ ಎದುರುದಾರರ ಪರ ವಕೀಲರು ಆಕ್ಷೇಪಣೆ ಎತ್ತಿ ಈ ಸಾಕ್ಷಿಗೆ ಹೇಗೆ ಈ ತಲುಪಿದೆ ಎಂಬ ಬಗ್ಗೆ ವಿವರಣೆ ಇಲ್ಲ ಮತ್ತು ಸಾಕ್ಷಿಯು ನಮ್ಮ ಕಂಪನಿಯ ಕೋರಿಕೆಯ ಮೇಲೆ ಅದನ್ನು ಪಡೆಯಲಾಗಿದೆ ಎಂದು ಹೇಳುತ್ತಾರೆ. ಹಾಗಾಗಿ ಸದರಿ ದಾಖಲೆಯ ಒಗ್ಗಣೆಗಳನ್ನು ಅಂತಿಮ ಆದೇಶ ಅಥವಾ ವಾದವಿವಾದಗಳ ಕಾಲಕ್ಕೆ ಪರಿಶೀಲಿಸಬಹುದಾಗಿರುತ್ತದೆ ಹಾಗಾಗಿ ಸದರಿ ದಾಖಲೆಯನ್ನ **ನಿ.ಪಿ - 27** ಎಂದು ಗುರುತಿಸಲಾಯಿತು.

**ಪಾಟೀ ಸವಾಲು 2 ನೇ ಎದುರುದಾರರ ಪರ ಶ್ರೀ ಎನ್.ವಿ.ಆರ್ ವಕೀಲರಿಂದ :**

ಕೊಯಿಟ್ ನಲ್ಲಿ ಈ ಮೊದಲು ವಿದೇಶಿಗರು ಕೇವಲ ಎರಡು ಮತ್ತು ಮೂರು ವರ್ಷಗಳು ಮಾತ್ರ ವಾಸಿಸಲು ಅವಕಾಶ ಇತ್ತು, ಈಗ ಐದು ವರ್ಷಗಳಿಗೆ ಅವಕಾಶವಿದೆ ಎಂದರೆ ಸಾಕ್ಷಿಯು ಮೊದಲು ಮೂರು ವರ್ಷಗಳಿಗೆ ಕೆಲಸ ಮಾಡಲು ಅವಕಾಶ ಕೊಡುತ್ತಿದ್ದು, ಈಗ ಅದು ಸ್ವಯಂ ಆಗಿ ನವೀಕರಣಗೊಳ್ಳುತ್ತದೆ ಎನ್ನುತ್ತಾರೆ. ಮೃತ ಸೈಮನ್ ಮತ್ತು ಅವರ ಕುಟುಂಬದವರು ನನಗೆ 2008 ರಿಂದ ಗೊತ್ತು. ನಾನು ಪ್ಲಾನೆಟ್ ಹೆಲ್ತ್ ಕಂಪನಿಯ ಖಾಯಂ ನೌಕರ, ಆದರೆ ನಾನು ದಾಖಲೆಯನ್ನು ಹಾಜರುಪಡಿಸಿಲ್ಲ. ಯಾವುದೇ ಹೊರದೇಶದ ಕಂಪನಿಯವರು ಯಾವುದೇ ಪತ್ರದ ಮೂಲಕ ಅಧಿಕಾರ ನೀಡಬೇಕಾದಲ್ಲಿ ಕೊಯತ್ ಮತ್ತು ಭಾರತ ರಾಯಭಾರಿ ಕಚೇರಿಗಳಿಂದ ಪರಿಶೀಲನೆ ಮಾಡಬೇಕಾಗುತ್ತದೆ ಎಂದರೆ ಸಾಕ್ಷಿಯು ಸಂಪೂರ್ಣವಾಗಿ ಆ ನಿಯಮಗಳ ಬಗ್ಗೆ ಅರಿವಿಲ್ಲದ ಕಾರಣ ಮಾಡಿಸಿಲ್ಲ ಎಂದು ಹೇಳುತ್ತಾರೆ.

2) ನಿ.ಪಿ -22 ರ ದಾಖಲೆಯಲ್ಲಿರುವ ಸಹಾರ್ ಅಲ್ ಅಹಮದ್ ಎನ್ನುವವರು ಹೆಲ್ತ್ ಪ್ಲಾನೆಟ್ ಕಂಪನಿಯ ಸಿ.ಇ.ಓ. ಎಂದು ತೋರಿಸಲು ಸಾಕ್ಷಿಯು ನಿ.ಪಿ - 23 ( Translated into english )ಕಂಪನಿಯ ಅಧಿಕೃತ ದಾಖಲೆಯಾಗಿ ಕಂಡುಬರುತ್ತದೆ ಎನ್ನುತ್ತಾರೆ. ನಿ.ಪಿ - 23 ರಲ್ಲಿ ಸಹಾರ್ ಅಲ್ ಅಹಮದ್ ಸಿ.ಇ.ಓ ಎಂದು ನಮೂದಿಸಿಲ್ಲ ಎಂದರೆ ಸರಿ. ಆ ಕಾರಣ ಸಹಾರ್

ಅಲ್ ಅಹಮದ್ ಕಂಪನಿಯ ಸಿ.ಇ.ಓ ಅಲ್ಲ ಎಂದರೆ ಸರಿಯಲ್ಲ. ನಿ.ಪಿ - 23 ಮತ್ತು 24 ರಲ್ಲಿ ಎಲ್ಲಿಯೂ ಕೂಡ ಯಾವ ಮೂಲ ದಾಖಲೆಯ ಆಧಾರದ ಮೇಲೆ ಭಾಷಾಂತರಿಸಲಾಗಿದೆ ಎಂದು ನಮೂದಿಸಿಲ್ಲ ಎಂದರೆ ಸರಿ. ನಿ.ಪಿ - 27 ರಲ್ಲಿ ಮೂರು ಕಡೆಗಳಲ್ಲಿ ಅಂದರೆ 28-10-2019, 15-12-2019 ಮತ್ತು 28-11-2019 ಮಾತ್ರ ಮೃತ ಸೈಮನ್ ಗೆ ಸಂಬಳ ಜಮೆಯಾದ ಬಗ್ಗೆ ಕಂಡುಬರುತ್ತದೆ ಎಂದರೆ ಸರಿ. ಮೃತ ಸೈಮನ್ ಅವರು 2008 ರಿಂದ 2019 ರವರೆಗೆ ನಮ್ಮ ಕಂಪನಿಯಿಂದ ಸಂಬಳ ತೆಗೆದುಕೊಳ್ಳುತ್ತಿದ್ದ ಬಗ್ಗೆ ಇಲ್ಲ. ನಿ.ಪಿ - 27 ರಲ್ಲಿ ಹಲವಾರು ವ್ಯಾಪಾರ ವ್ಯವಹಾರಗಳಿಗೆ ಸೈಮನ್ ಖಾತೆಯಿಂದ ಹಣ ಜಮೆಗೊಂಡ ಬಗ್ಗೆ ನಾನು ಖಾತರಿ ಪಡಿಸಲು ಸಾಧ್ಯವಿಲ್ಲ. ನಿ.ಪಿ - 27 ಮೃತನ ಖಾಸಗಿ ಬ್ಯಾಂಕ್ ಖಾತೆ ಎಂದರೆ ಸರಿ.

3) ಯಾವುದೇ ಕಂಪನಿಯಲ್ಲಿ ವ್ಯಾಪಾರ ವ್ಯವಹಾರಗಳಿಗೆ ಚಾಲ್ತಿ ಖಾತೆಯನ್ನು ನಿರ್ವಹಿಸುತ್ತಾರೆ ಎಂದರೆ ಸರಿ. ಸೈಮನ್ ನಮ್ಮ ಕಂಪನಿಯ ಪರ ವ್ಯವಹಾರ ಮಾಡುತ್ತಿದ್ದ ಮತ್ತು ಆತನಿಗೆ ಸಂಬಳ ಕೊಡುತ್ತಿದ್ದ ಬಗ್ಗೆ ದಾಖಲೆ ಇಲ್ಲ. ನಾನು ಕೊಯಿತ್ ಇಂದ ಖಾಸಗಿಯಾಗಿ ಬಂದು ಸಾಕ್ಷಿ ಕೊಡಲು ಇಪ್ಪತ್ತೈದು ಸಾವಿರ ಖರ್ಚು ಮಾಡಿದ್ದೇನೆ ಎಂದರೆ ಸರಿ. ನಾನು ರಜೆ ದಿನಗಳ ಮೇಲೆಯೂ ಸಹ ಬಂದಿದ್ದೇನೆ ಎನ್ನುತ್ತಾರೆ. ಅರ್ಜಿದಾರರು ಸರಿತಾ ಮತ್ತು ಅವರ ಮಗ ನನ್ನನ್ನು ಸಾಕ್ಷಿ ಕೊಡಲು ಕೋರಿರುತ್ತಾರೆ ಎಂದರೆ ಸಾಕ್ಷಿಯು ಕಂಪನಿ ಮತ್ತು ನನ್ನನ್ನು ಸಹ ಕೇಳಿರುತ್ತಾರೆ ಎನ್ನುತ್ತಾರೆ. ನಿ.ಪಿ - 15 ರ ಪ್ರಕಾರ ವಿನೋದ್ ಸೈಮನ್ ಆರು ಬಾರಿ ಮಾತ್ರ ವಾಸದ ಅನುಮತಿ ಕೊಟ್ಟಿದ್ದರು ಎಂದರೆ ಸಾಕ್ಷಿಯು ಸ್ವಯಂ ನವೀಕರಿಸಬಹುದಾಗಿತ್ತು ಎನ್ನುತ್ತಾರೆ. ಕಂಪನಿಯವರ ಕಾರ್ಯ ಆದೇಶದ ಪ್ರಕಾರ ಕೊಯತ್ ಸರ್ಕಾರವು ರಿನಿಡೆನ್ಸಿ ಪರ್ಮಿಷನ್ ನೀಡುತ್ತದೆ ಎಂದರೆ ಸಾಕ್ಷಿಯು ಪ್ರತಿಬಾರಿ ನವೀಕರಿಸಬಹುದು ಎನ್ನುತ್ತಾರೆ.

4) ಕಾರ್ಯ ಆದೇಶ ಮತ್ತು ವಾಸದ ಅನುಮತಿಯನ್ನು ಸ್ವಯಂ ಆಗಿ ನವೀಕರಿಸಬಹುದು ಎಂದು ತೋರಿಸಲು ದಾಖಲೆ ಇಲ್ಲ. ಪ್ರತಿ ಬಾರಿ ಕಾರ್ಯ ಆದೇಶ ಪಡೆದು ವಾಸದ ಅನುಮತಿಯನ್ನು ಪಡೆದಿರುತ್ತಾನೆ ಎಂದರೆ ಸರಿಯಲ್ಲ. ನಿ.ಪಿ - 15 ರಲ್ಲಿ ಮೃತ ಸೈಮನ್ ಮಾರಾಟ ಪ್ರತಿನಿಧಿ ಎಂದು ಬರೆಸಿದ್ದಾರೆ ಎಂದರೆ ಸರಿ. ಸೈಮನ್ ಹೆಲ್ತ್ ಪ್ಲಾನೆಟ್ ಕಂಪನಿಯಲ್ಲಿ ಅಂತರಾಷ್ಟ್ರೀಯ ಖರೀದಿದಾರನಾಗಿ (International purchaser) ತೋರಿಸಲು ದಾಖಲೆ ಇಲ್ಲ. ಕೊಯತ್ ನಲ್ಲಿ ಯಾವ ವಿದೇಶದವರನ್ನು ಖಾಯಂ ವಾಸದ ಅನುಮತಿ ನೀಡುವುದಿಲ್ಲ ಎಂದರೆ ಸರಿಯಲ್ಲ. ಆದರೆ ಅದರ ಬಗ್ಗೆ ದಾಖಲೆ ಹಾಜರುಪಡಿಸಲು ಆಗುವುದಿಲ್ಲ. ಮೃತ ಸೈಮನ್ ಯಾವಾಗಲೂ ತಾತ್ಕಾಲಿಕವಾಗಿ ಮತ್ತು ಸ್ವಂತ ವ್ಯಾಪಾರ ಮಾಡುತ್ತಿದ್ದ ಎಂದು ಸೂಚಿಸಿದರೆ ಸರಿಯಲ್ಲ. ಸೈಮನ್ ನಮ್ಮ ಕಂಪನಿಯಲ್ಲಿ ಖಾಯಂ ನೌಕರ ಎಂದು ತೋರಿಸಲು ದಾಖಲೆ ಇಲ್ಲ.

5) ಮೃತನಿಗೆ ನಮ್ಮ ಕಂಪನಿಯಿಂದ ನೇಮಿಸಿಕೊಂಡಿದ್ದೆವು ಎಂದು ತೋರಿಸಲು ಆದೇಶವಾಗಿರುವ ಮೂಲ ದಾಖಲೆಯನ್ನು ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ ಸಾಕ್ಷಿಯು ಆನ್ ಲೈನ್ ಪ್ರತಿಯನ್ನು ಮಾತ್ರ ಹಾಜರುಪಡಿಸಬಹುದು, ಮೂಲ ದಾಖಲೆ ಹಾಜರುಪಡಿಸಲು ತೊಂದರೆ ಸಾಧ್ಯವಿಲ್ಲ ಎಂದು ಹೇಳುತ್ತಾರೆ. ಮೃತನ ಶೈಕ್ಷಣಿಕ ಅರ್ಹತೆಯ ಬಗ್ಗೆ ದಾಖಲೆಯನ್ನು ಹಾಜರುಪಡಿಸಿಲ್ಲ. ಅರ್ಜಿದಾರರಿಗೆ ಸಹಾಯ ಮಾಡುವ ಉದ್ದೇಶದಿಂದ ನಿ.ಪಿ - 22 ರಿಂದ 27 ರ ದಾಖಲೆಯನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ - 23 ಮತ್ತು 24 ಮೂಲ ದಾಖಲೆಗಳನ್ನು ಆಧಾರಿಸಿ ಭಾಷಾಂತಿಸಿದ ದಾಖಲೆ ಅಲ್ಲ ಎಂದರೆ ಸರಿಯಲ್ಲ. ನಿ.ಪಿ - 23 ಮತ್ತು 24 ರಲ್ಲಿ ಸಹಿ ಮಾಡಿಲ್ಲ ಎಂದರೆ ಸಾಕ್ಷಿಯು ಇನಿಷಿಯಲ್ ಹಾಕಿದ್ದಾರೆ ಎನ್ನುತ್ತಾರೆ. ಆದರೆ ಆ ದಾಖಲೆಗಳಲ್ಲಿ ಭಾಷಾಂತರಿಸುವ ವ್ಯಕ್ತಿಯ ಹೆಸರು ಮತ್ತು ವಿಳಾಸ ನಮೂದಿಸಿಲ್ಲ ಎಂದರೆ ಸಾಕ್ಷಿಯು ಹೌದು ಅದು ಸರ್ಕಾರ ಅಂಗೀಕರಿಸಿದ ಸಂಸ್ಥೆ ಎನ್ನುತ್ತಾರೆ. ಬ್ರಿಟಿಷ್ ಭಾಷಾಂತರ ಸಂಸ್ಥೆಗೆ ಕೊಯತ್ ಸರ್ಕಾರದವರು ಅನುಮತಿ ನೀಡಿದ ಬಗ್ಗೆ ನಮೂದಿಸಿಲ್ಲ ಎಂದರೆ ಸರಿ.

6) ಸೈಮನ್ ಒಬ್ಬ ಅನಕ್ಷರಸ್ಥನಾಗಿದ್ದು, ಅವನು 800KD ಸಂಬಳ ಪಡೆಯಲಿಲ್ಲ ಎಂದರೆ ಸರಿಯಲ್ಲ. ನಾನು ಪ್ಲಾನೆಟ್ ಕಂಪನಿಯ ಖಾಯಂ ನೌಕರನಲ್ಲದ ಕಾರಣ ನನಗೆ ಸಾಕ್ಷಿ ನುಡಿಯಲು ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ಯಾವುದೇ ಕಂಪನಿಯು ಖಾಯಂ ನೌಕರ ಮರಣ ಹೊಂದಿದ್ದಲ್ಲಿ ನಷ್ಟ ಭತ್ಯೆ ಪರಿಹಾರ ನೀಡುತ್ತಾರೆ ಎಂದರೆ ಸರಿಯಲ್ಲ. ಆದರೆ ಮೃತ ಸೈಮನ್ ಗೆ ಪರಿಹಾರ ನೀಡಿದ ಬಗ್ಗೆ ದಾಖಲೆ ಇಲ್ಲ. ಭಾರತದಲ್ಲಿನ ಜೀವನ ವೆಚ್ಚ ಮಟ್ಟವು ಕೊಯಟ್ ನಲ್ಲಿ ಹತ್ತು ಪಟ್ಟು ದುಬಾರಿ ಇರುತ್ತದೆ ಎಂದರೆ ಸರಿಯಲ್ಲ. ಯಾವುದೇ ದಾಖಲೆಗಳ ಆಧಾರ ಇಲ್ಲದೆ ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸಾಕ್ಷಿ ನುಡಿಯಲು ಬಂದಿದ್ದೇನೆ ಎಂದರೆ ಸರಿಯಲ್ಲ. 2008 ರಿಂದ 2019 ರವರೆಗೆ ನಮ್ಮ ಕಂಪನಿಯಿಂದ ಯಾವುದೇ ಸಂಬಳವನ್ನು ಪಾವಸಿದೇ ಇರುವ ಕಾರಣ ನಿ.ಪಿ -19 ಮತ್ತು 27 ರಲ್ಲಿ ಕಂಡುಬರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ** : ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸ ಇ**

**ಸದಸ್ಯರು, ಹೆಚ್ಚುವರಿ ಮೋಟಾರು ವಾಹನ ಅಪಘಾತ ಪರಿಹಾರ ಮಂಡಳಿ, ಕುಂದಾಪುರ**